**ಓ.ಎಸ್. ನಂ. 93/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 12.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಮೂರು ಕೈ ಬರಹದ ಪಹಣಿಗಳ ದೃಢೀಕೃತ ನಕಲನ್ನು ನಿಪಿ1 ರಿಂದ ನಿಪಿ3 ಎಂದು, ಎರಡು ಗಣಕೀಕೃತ ಪಹಣಿಗಳನ್ನು ನಿಪಿ4 ಮತ್ತು ನಿಪಿ5 ಎಂದು, ನನ್ನ ಚಿಕ್ಕಪ್ಪ ಸೈಯದ್ ಪೀರ್, ನನ್ನ ತಾಯಿ ಜುಬೇದಾ ಬಾನು, ನನ್ನ ತಂದೆ ಸೈಯದ್ ಗೌಸ್, ನನ್ನ ತಾತ ಸೈಯದ್ ಸಾಬುಲಾಲ್ ರವರ ಮರಣ ಪ್ರಮಾಣಪತ್ರಗಳನ್ನು ನಿಪಿ6 ರಿಂದ ನಿಪಿ9 ಎಂದು, ಮೂರು ಮ್ಯುಟೇಶನ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಪಿ10 ರಿಂದ ನಿಪಿ12 ಎಂದು, ಎಂ.ಆರ್ 18/2009-10 ನ್ನು ನಿಪಿ13 ಎಂದು, ಎರಡು ಇ.ಸಿ ಗಳನ್ನು ನಿಪಿ14 ಮತ್ತು ನಿಪಿ15 ಎಂದು, ತಹಶೀಲ್ದಾರ್, ಹೆಚ್.ಡಿ.ಕೋಟೆ ರವರು ನೀಡಿರುವ ಹಿಂಬರಹವನ್ನು ನಿಪಿ16 ಎಂದು, ಒಂದು ಪಸಲು ಪಹಣಿಯ ದೃಢೀಕೃತ ನಕಲನ್ನು ನಿಪಿ17 ಎಂದು, ಒಂದು ಕೆತ್ವಾರಿನ ದೃಢೀಕೃತ ನಕಲನ್ನು ನಿಪಿ18 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.